
# ಬೆಳಕಿನ ಸಂಚಲನ

ಸಂಪುಟ 6, ಸಂಚಿಕೆ 2 | ದ್ವೈಮಾಸಿಕ ವಾರ್ತಾಪತ್ರ | ಮಾರ್ಚ್–ಏಪ್ರಿಲ್ 2018



**ಗುರೂಜಿ ಕೃಷ್ಣಾನಂದ** (1939-2012)

## ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಠಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

## ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

## ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

## ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷ ಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

## ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ ಫೆಬ್ರುವರಿ 6, 2000ದ ಭಾಷಣದ ಆಯ್ದ ಭಾಗಗಳು)

**ಅನು: ಶ್ರೀದೇವಿ**

ನಮ್ರತೆಯು, ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯನ್ನು ಗೌರವಿಸುವಂತೆ ಮಾಡುತ್ತದೆ ಎಂದು ನಮಗೆ ತಿಳಿದಿದೆ. ಇನ್ನೊಬ್ಬರ ಭಾವನೆಗಳನ್ನು, ಇನ್ನೊಬ್ಬರ ಆಲೋಚನೆಗಳನ್ನು, ಇನ್ನೊಬ್ಬರ ಅಭಿಪ್ರಾಯಗಳನ್ನು ಗೌರವಿಸಲು ಪ್ರಾರಂಭಿಸುತ್ತೇವೆ. ಪ್ರತಿಯೊಂದೂ ಬೇರೆ ಬೇರೆಯಾಗಿರುತ್ತದೆ. ಈ ಭೂಮಿಯ ಮೇಲೆ ಕೋಟ್ಯಾಂತರ ಜನರಿದ್ದೇವೆ. ಪ್ರತಿಯೊಬ್ಬರೂ ಬೇರೆ ಬೇರೆಯಾಗಿರುತ್ತಾರೆ. ಯಾವುದೇ ವಿರೋಧವಿಲ್ಲದೆ ಒಬ್ಬ ವ್ಯಕ್ತಿಯನ್ನು ಅವನು ಇರುವ ಹಾಗೇಯೇ ಒಪ್ಪಿಕೊಳ್ಳುತ್ತೇವೆ. ನಮ್ರತೆಯು ಇನ್ನೂಬ್ಬ ವ್ಯಕ್ತಿ ಹೇಳುವುದನ್ನು ಕೇಳಿಸಿಕೊಳ್ಳುವಂತೆ ಮಾಡುತ್ತದೆ. ನಾನು ಇನ್ನೊಬ್ಬ ವ್ಯಕ್ತಿಯನ್ನು ಗೌರವಿಸುವ ಕಾರಣದಿಂದಾಗಿ ಆತ ಹೇಳುವುದನ್ನು ಕೇಳಿಸಿಕೊಳ್ಳುತ್ತೇನೆ, ಆತನ ಅಭಿಪ್ರಾಯಗಳನ್ನು ಗೌರವಿಸುತ್ತೇನೆ. ಬೇರೆಯವರು ಹೇಳುವುದನ್ನು ಕೇಳಿಸಿಕೊಳ್ಳುವುದು ಬಹಳ ಕಷ್ಟ. ಬೇರೆಯವರ ಅಭಿಪ್ರಾಯಗಳನ್ನು ಕೇಳಿಸಿಕೊಳ್ಳಲು ಪ್ರಾರಂಭಿಸಿದಾಗ, ಇನ್ನೊಂದು ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳುವುದನ್ನು ಕೂಡ ಪ್ರಾರಂಭಿಸುತ್ತೇವೆ. ಆಗ, ಪೂರ್ಣವಾಗಿ ಒಪ್ಪದಿದ್ದರೂ ಕನಿಷ್ಠ ಪಕ್ಷ ಅರ್ಥಮಾಡಿಕೊಳ್ಳುತ್ತೇವೆ. ಭಿನ್ನಾಭಿಪ್ರಾಯವಿದ್ದರೂ ಗೌರವವನ್ನು ಹೊಂದಿರುತ್ತೇವೆ ಹಾಗೂ ಅಸಾಮರಸ್ಯ ಕಡಿಮೆಯಾಗುತ್ತದೆ. ಸಾಮರಸ್ಯ ಹೆಚ್ಚಾಗುತ್ತದೆ. ಇದು ಬಹಳ ಸರಳವಾದ ವಿಷಯ. ಸಾಮಾನ್ಯವಾಗಿ ಈ ಎಲ್ಲಾ ವಿಷಯಗಳನ್ನು ನಾವು ಅರ್ಥಮಾಡಿಕೊಳ್ಳುತ್ತೇವೆ, ಪುಸ್ತಕದಲ್ಲಿ ಬರೆದಿಟ್ಟುಕೊಳ್ಳುತ್ತೇವೆ ಆದರೆ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದಿಲ್ಲ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಅನೇಕ ತಿಂಗಳುಗಳಿಂದ ಕಾಲು ನೋವನ್ನು ಅನುಭವಿಸುತ್ತಿದ್ದ ಶಾಲಾ ಶಿಕ್ಷಕರೊಬ್ಬರು, ನಮ್ಮ ಕಾರ್ಯಕರ್ತರು ಅವರ ಶಾಲೆಯಲ್ಲಿ ನಡೆಸಿದ ಲೈಟ್ ಚಾನಲಿಂಗ್ ಸೆಷನ್‌ನಲ್ಲಿ ಲೈಟ್ ಚಾನಲ್ ಮಾಡುತ್ತಿದ್ದಾಗ ಅವರ ನೋವು ಮಾಯವಾಗಿದ್ದನ್ನು ಮನಗಂಡರು. ಕೃತಜ್ಞತೆಯ ಕಣ್ಣೀರಿನೊಂದಿಗೆ ಅವರ ಅನುಭವವನ್ನು ನಮ್ಮ ಕಾರ್ಯಕರ್ತರೊಡನೆ ಹೇಳಿಕೊಂಡರು. ಬೆಳಕಿನಲ್ಲಿ ಹೀಲಿಂಗ್ ಮಾಡುವ ಚೈತನ್ಯಗಳಿವೆ. ಸಕಾರಾತ್ಮಕವಾದುದೆಲ್ಲವೂ ಬೆಳಕಿನಲ್ಲಿದೆ. ಅನೇಕ ಶಾಲಾ ಮಕ್ಕಳು ಮತ್ತು ಶಿಕ್ಷಕರು, ಲೈಟ್ ಚಾನಲಿಂಗ್ ಮಾಡಿದನಂತರ ಅವರಿಗಾದ ಸಮಾಧಾನ ಹಾಗೂ ಸಕಾರಾತ್ಮಕತೆಯ ಅನುಭವವನ್ನು ಹಂಚಿಕೊಂಡಿದ್ದಾರೆ.

ಲೈಟ್ ಚಾನಲ್ ಮಾಡುವುದರಿಂದ ಉಂಟಾಗುವ ಸಕಾರಾತ್ಮಕ ಪರಿಣಾಮಗಳನ್ನು ಅನುಭವಿಸಿದ ನಂತರ, ಅನೇಕ ಶಾಲೆಗಳಲ್ಲಿ ತರಗತಿಗಳು ಪ್ರಾರಂಭವಾಗುವ ಮೊದಲು ಬೆಳಕನ್ನು ಚಾನಲ್ ಮಾಡುವುದನ್ನು ಅಭ್ಯಾಸಮಾಡಿಕೊಂಡಿದ್ದಾರೆ. ಇದು ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಸಹಾಯ ಮಾಡುತ್ತಿದೆ. ಬೆಳಕು ಎಲ್ಲರಿಗೂ ಸಹಾಯ ಮಾಡುತ್ತದೆ. ಯಾರುಬೇಕಾದರೂ ಬೆಳಕನ್ನು ಚಾನಲ್ ಮಾಡಿ ಸ್ವತಃ ತಮಗೆ ಸಹಾಯ ಮಾಡಿಕೊಳ್ಳಬಹುದು ಮತ್ತು ಪ್ರಪಂಚಕ್ಕೂ ಸಹಾಯ ಮಾಡಬಹುದು.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

8ನೇ ವಿಶ್ವ ಚಾನಲ್ಸ್ ದಿನವು ಲಕ್ಷಾಂತರ ಜನರಿಗೆ ಸಂತೋಷವನ್ನು ಹಾಗೂ ಉತ್ತಮ ಪ್ರಪಂಚದ ಭರವಸೆಯನ್ನು ನೀಡಿದೆ. ಈ ಭರವಸೆಯ ಹಿಂದೆ, ಆ ವಿಶೇಷ ದಿನದಂದು ಬೆಳಕನ್ನು ಚಾನಲ್ ಮಾಡಿದ ಲಕ್ಷಾಂತರ ಜನರ ಆಶಯವಿದೆ. ಬೆಳಕಿನ ಕ್ರಾಂತಿ ಸರಿಯಾದ ಮಾರ್ಗದಲ್ಲಿ ಮುನ್ನಡೆಯುತ್ತಿದೆ. ಕ್ರಮೇಣವಾಗಿ ಈ ಪ್ರಪಂಚವು ಬೆಳಕಿಗೆ ತೆರೆದುಕೊಳ್ಳುತ್ತಿದೆ.

ನಮ್ಮ ಕಾರ್ಯಕರ್ತರು ದಣಿವಿಲ್ಲದೆ ಕೆಲಸಮಾಡಿ ನೂರಾರು ಶಾಲೆಗಳಿಗೆ ಭೇಟಿ ನೀಡಿದರು. ಅವರ ಪರಿಪೂರ್ಣವಾದ ಯೋಜನೆಯ ಬಗ್ಗೆ ನಾನು ಯಾವಾಗಲೂ ಮೂಕವಿಸ್ಮಿತನಾಗುತ್ತೇನೆ. ಅವರ ನಿಷ್ಕಪಟತೆ ಹಾಗೂ ಪ್ರಾಮಾಣಿಕತೆ ಯಾವಾಗಲೂ ನನ್ನ ಮನಮುಟ್ಟುತ್ತದೆ.

ಅಪಾರ ಬೆಂಬಲ ನೀಡಿದ ಎಲ್ಲಾ ಶಾಲಾ ಅಧಿಕಾರಿಗಳಿಗೂ, ಶಿಕ್ಷಕರಿಗೂ, ಮಕ್ಕಳಿಗೂ ಹಾಗೂ ಹಿರಿಯರಿಗೂ ನಾವು ವಂದನೆಗಳನ್ನು ಸಲ್ಲಿಸುತ್ತೇವೆ. ನಮ್ಮಿಂದ ಅವರನ್ನು ಪ್ರತ್ಯೇಕಿಸಲಾಗುವುದಿಲ್ಲ. ಲೈಟ್ ಚಾನಲಿಂಗ್ ಬಗ್ಗೆ ಅವರಿಗಿರುವ ಪ್ರೀತಿ ಯಾವಾಗಲೂ ನಮ್ಮನ್ನು ಉತ್ತೇಜಿಸುತ್ತದೆ. ಅವರ ಬೆಂಬಲವಿಲ್ಲದೆ ಲೈಟ್ ಚಾನಲಿಂಗ್ ತಂಡ ಅಪೂರ್ಣವೆನಿಸುತ್ತದೆ.

**ಮಾನಸ ಫೌಂಡೇಶನ್ (ರಿ)**

ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077, ಭಾರತ.

ಫೋನ್: (080) 2846 5280, 99000 75280 (10am to 5pm), ಇ–ಮೇಲ್: info@lightagemasters.com

website : www.lightagemasters.com, www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಾಗಿಲ್ಲ.

### ಬೆಂಗಳೂರು

**ಸೋಮವಾರದಿಂದ ಶುಕ್ರವಾರದವರೆಗೆ (ಸಂಜೆ 7 - 7.15)**
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ
☎ 9084121545 ಶ್ರೀ ಕೆ. ಚಂದ್ರಶೇಖರ್

**ಸೋಮವಾರ (ಸಂಜೆ 6.30 - 7)**
ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಬುಧವಾರ (ಸಂಜೆ 6.30 - 7)**
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಶುಕ್ರವಾರ (ಸಂಜೆ 6.30 - 7)**
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ, ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ ಭೋಸೆಕರ್

**ಶುಕ್ರವಾರ (ಮಧ್ಯಾಹ್ನ 12.00)**
ಸಿದ್ಧಿ ವಿನಾಯಕ ದೇವಸ್ಥಾನ, 59/1,
ಹಚಿನ್ಸ್ ರಸ್ತೆ, 3ನೇ ಅಡ್ಡರಸ್ತೆ, ಕೂಕ್ ಟೌನ್
☎ 9980205803 ಶ್ರೀಮತಿ ನಿರ್ಮಲ ಬಾಲ

**ಶನಿವಾರ (ಸಂಜೆ 6.30 - 7)**
ಬಲಮುರಿ ಮಹಾಗಣಪತಿ, ಶ್ರೀ ರಾಜರಾಜೇಶ್ವರಿ ಮತ್ತು ಶ್ರೀ ಲಕ್ಷ್ಮೀ ನಾರಾಯಣ ದೇವಸ್ಥಾನ,
8ನೇ ಅಡ್ಡರಸ್ತೆ, ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸ್ಯಾಟ್‌ಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ-ಮೇಲ್ info@lightagemasters.com ಗೆ ಬರೆಯಿರಿ.



2018ರ ವಿಶ್ವ ಚಾನಲ್ಸ್ ದಿನದ ಯಶಸ್ಸನ್ನು ಕಾರ್ಯಕರ್ತರು ಆಚರಿಸಿದರು.

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ನಾವು ಧ್ಯಾನ ಮಾಡಿದಾಗ ಹಾಗೂ ಎಲ್ಲಾ ಭಾವನೆಗಳನ್ನು ಮತ್ತು ಆಲೋಚನೆಗಳನ್ನು ಸಕಾರಾತ್ಮಕಗೊಳಿಸಿದಾಗ ಜೀವನ ಬಹಳ ಸುಂದರವಾಗುತ್ತದೆ. ಧ್ಯಾನವಷ್ಟೇ ಸಾಕಾಗುವುದಿಲ್ಲ, ಸಕಾರಾತ್ಮಕರಾಗುವ ನಿರಂತರ ಪ್ರಯತ್ನ ಅತ್ಯವಶ್ಯಕ.
- ನಮ್ಮಲ್ಲಿ ನೈಜ, ಸರಳ, ಪ್ರಾಮಾಣಿಕ ಹಾಗೂ ಶುದ್ಧವಾದ ಭಾವನೆ ಮತ್ತು ಆಲೋಚನೆಯಿದ್ದಾಗ ಬಹಳ ಸಂತೋಷದಿಂದಿರುತ್ತೇವೆ. ಯಾವುದೇ ಗೊಂದಲವಿರುವುದಿಲ್ಲ. ನಾವೇ ದೇವರು ಎಂದೆನಿಸುತ್ತದೆ.
- ಒಬ್ಬ ವ್ಯಕ್ತಿಯ ಜೀವನದ ಗುಣಮಟ್ಟ ಬದಲಾದಾಗ, ಜಾಗತಿಕ ಮಟ್ಟದಲ್ಲೂ ಕೂಡ ಜೀವನದ ಗುಣಮಟ್ಟ ಹೇಗೋ ಬದಲಾಗುತ್ತದೆ. ಇದು ಹೇಗೆ ಸಾಧ್ಯ ಎಂದು ನಿಮಗೆ ಆಶ್ಚರ್ಯವಾಗಬಹುದು, ಆದರೆ ಇದು ನಿಜವಾದ ಸಂಗತಿ. ಒಬ್ಬ ವ್ಯಕ್ತಿ ಬಹಳ ವ್ಯತ್ಯಾಸವನ್ನುಂಟುಮಾಡಬಲ್ಲ.
- ಹತಾಶೆಯನ್ನು ನಿಭಾಯಿಸಲು ಇರುವ ಒಂದು ಸರಳವಾದ ಮಾರ್ಗವೆಂದರೆ ದೇವರೊಂದಿಗೆ ಸಂಬಂಧವನ್ನು ಬೆಳೆಸಿಕೊಳ್ಳುವುದು. ಅವನಿಂದ ಸಹಾಯ ಬೇಡಿದರೆ, ಅದು ನಮಗೆ ಸಿಗುತ್ತದೆ. ಕೆಲವೊಂದು ಸಮಯಗಳಲ್ಲಿ ತಡವಾಗಬಹುದು ಆದರೆ ನಮಗೆ ಯಾವಾಗಲೂ ಸಹಾಯ ಸಿಕ್ಕೇಸಿಗುತ್ತದೆ.
- ಬದುಕಿನ ಹೋರಾಟಗಳು ವಾಸ್ತವಾಂಶಗಳನ್ನು, ಸತ್ಯವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತವೆ. ನಾವು ಹೋರಾಟ ನಡೆಸಿದಾಗ ಮಾತ್ರ ನಮ್ಮ ಇಡೀ ವ್ಯಕ್ತಿತ್ವವನ್ನು ಸಜ್ಜುಗೊಳಿಸುತ್ತೇವೆ. ಇಲ್ಲದಿದ್ದರೆ ನಿರಾತಂಕವಾಗಿರುತ್ತೇವೆ, ಸೋಮಾರಿಗಳಾಗುತ್ತೇವೆ.
- ನಾವು ಪರಿಶುದ್ಧರಾದಾಗ, ಮಕ್ಕಳಂತೆ ಮುಗ್ಧರಾದಾಗ ಮಾತ್ರ ನಾವು ದೇವರೊಂದಿಗೆ ಸಂಪರ್ಕಹೊಂದಬಹುದು.
- ನಮ್ಮ ಎಲ್ಲಾ ಸಮಸ್ಯೆಗಳಿಗೆ ಹಾಗೂ ವೈಫಲ್ಯಗಳಿಗೆ ಸಾಮಾನ್ಯವಾಗಿ ನಮ್ಮ ಕರ್ಮಗಳನ್ನು ದೂಷಿಸುತ್ತೇವೆ. ಆದರೆ, ಯಾವಾಗಲೂ ಕರ್ಮಗಳೇ ನಾವು ಕಷ್ಟಗಳನ್ನು ಅನುಭವಿಸುವಂತೆ ಮಾಡುವುದಿಲ್ಲ. ನಾವು ತೆಗೆದುಕೊಳ್ಳುವ ಹಾಗೂ ಈಗಲೂ ತೆಗೆದುಕೊಳ್ಳುತ್ತಿರುವ ತಪ್ಪು ನಿರ್ಧಾರಗಳು, ತಪ್ಪು ಆಯ್ಕೆಗಳು ಇದಕ್ಕೆ ಕಾರಣವಾಗುತ್ತವೆ.

–ಗುರೂಜಿ ಕೃಷ್ಣಾನಂದ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 5352 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 28.48 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | : | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | : | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## 8ನೇ ವಿಶ್ವ ಚಾನಲ್ಸ್ ದಿನ

**ಮನೋಜ್ ಕುಮಾರ್ ಚೋಪ್ರ; ಅನು: ಪಾಂಡುರಂಗ**

ಗುರೂಜಿ ಕೃಷ್ಣಾನಂದರವರು 18–5–2008ರಂದು ಪ್ರಾರಂಭಿಸಿದ ಸದ್ದಿಲ್ಲದೆ ನಡೆಯುವ ಸಂಚಲನ 'ಬೆಳಕಿನಿಂದ ಕ್ರಾಂತಿ'ಯು, ಯಶಸ್ವಿಯಾಗಿ 10ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಬೆಳಕಿನ ಕ್ರಾಂತಿಯು ಎಂದಿಗೂ ವಿಫಲವಾಗುವುದಿಲ್ಲ. ಇದೇ ಅಂತಿಮ ಕ್ರಾಂತಿಯಾಗಿದ್ದು, ಖಂಡಿತವಾಗಿಯೂ ಮನುಕುಲವನ್ನು ಹೊಸ ಯುಗದೆಡೆಗೆ ಮುನ್ನಡೆಸುತ್ತದೆ. 8ನೇ ವಿಶ್ವ ಚಾನಲ್ಸ್ ದಿನವು ಮನುಕುಲವನ್ನು ಭವ್ಯವಾದ ಸುವರ್ಣ ಯುಗಕ್ಕೆ ಕೊಂಡೊಯ್ಯುವ ಅಂತಹದೇ ಮತ್ತೊಂದು ಪ್ರಯತ್ನವಾಗಿತ್ತು.

ನಮಗೆಲ್ಲರಿಗೂ 8ನೇ ವಿಶ್ವ ಚಾನಲ್ಸ್ ದಿನವು ಮತ್ತೊಂದು ಮರೆಯಲಾಗದ ದಿನವಾಗಿತ್ತು. ಈ ದಿನವನ್ನು ಯಶಸ್ವಿಗೊಳಿಸಲು 150ಕ್ಕೂ ಹೆಚ್ಚು ಕಾರ್ಯಕರ್ತರು ಒಂದು ತಿಂಗಳಿಗೂ ಹೆಚ್ಚು ಕಾಲ ಕೆಲಸ ಮಾಡಿದ್ದಾರೆ. ಅವರು ರೂಪಿಸಿಕೊಂಡಿದ್ದ ಯೋಜನೆ ಕಷ್ಟಸಾಧ್ಯವಾಗಿದ್ದರೂ, ಪರಿಪೂರ್ಣ ರೀತಿಯಲ್ಲಿ ಸಾಕಾರಗೊಂಡಿದೆ. ಸೂಕ್ಷ್ಮ ಮಟ್ಟದ ಮಾಸ್ಟರುಗಳ ಅನುಗ್ರಹ ಮತ್ತು ವಿಶ್ವದ ಸಹಾಯದಿಂದ ಲೈಟ್ ಚಾನಲಿಂಗ್ ತಂಡ ತನ್ನ ಗುರಿಯನ್ನು ಮುಟ್ಟಿದ್ದಷ್ಟೇ ಅಲ್ಲದೆ ಅದನ್ನೂ ಮೀರಿದ್ದಾರೆ. ಮಹರ್ಷಿ ಅಮರರವರಿಗೆ, ಅವರ 99ನೇ ಜನ್ಮ ದಿನದಂದು ವಿಶೇಷ ಕೊಡುಗೆಯನ್ನು ಅವರು ನೀಡಿದ್ದಾರೆ. ಆ ದಿನ ಹತ್ತು ಲಕ್ಷಕ್ಕಿಂತ ಹೆಚ್ಚು ಮಕ್ಕಳು ಮತ್ತು ಹಿರಿಯರು ಬೆಳಕನ್ನು ಚಾನಲ್ ಮಾಡಿದ್ದಾರೆ. ಭಾರತದಾದ್ಯಂತ ಸುಮಾರು 2400 ಶಾಲೆಗಳು ಈ ಕ್ರಾಂತಿಯಲ್ಲಿ ಭಾಗವಹಿಸಿದ್ದವು. ಬೆಂಗಳೂರು, ಮೈಸೂರು, ತುಮಕೂರು, ಮತ್ತು ಕರ್ನಾಟಕದ ಇತರ ಭಾಗಗಳಲ್ಲಿ, ಚೆನ್ನೈ, ಮಧುರೈ, ಮತ್ತು ತಮಿಳುನಾಡಿನ ಇತರ ಭಾಗಗಳಲ್ಲಿ, ಮುಂಬೈ, ಪುಣೆ, ಸಾಂಗ್ಲಿ, ಅಮರಾವತಿ ಮತ್ತು ಮಹಾರಾಷ್ಟ್ರದ ಇತರ ಭಾಗಗಳಲ್ಲಿ, ಹೈದರಾಬಾದ್, ವಿಶಾಖಪಟ್ಟಣಂ, ನವದೆಹಲಿ ಮತ್ತು ರಾಜಸ್ತಾನದಲ್ಲಿ ಲೈಟ್ ಚಾನಲಿಂಗ್ ಸೆಷನ್‌ಗಳು ನಡೆದವು.

ನಮ್ಮ ಕಾರ್ಯಕರ್ತರಿಗೆ ಈ ವರ್ಷ ಬಹಳ ಸವಾಲಾಗಿ ಪರಿಣಮಿಸಿದ್ದರೂ, ಅವರ ಬದ್ಧತೆ ಮತ್ತು ಉತ್ಸಾಹ ಎಲ್ಲ ಅಡೆತಡೆಗಳನ್ನು ದಾಟುವಂತೆ ಮಾಡಿದವು. ಅವರು ಒಬ್ಬರಿಗೊಬ್ಬರು ಬೆಂಬಲ ನೀಡಿದರು. ಅವರೆಲ್ಲರೂ ಅತ್ಯುತ್ಸಾಹದಿಂದ ಕೆಲಸ ಮಾಡಿದರು. ಅನೇಕ ಕಾರ್ಯಕರ್ತರು ಲೈಟ್ ಚಾನಲಿಂಗ್ ಸೆಷನ್‌ಗಳಿಗಾಗಿ ಶಾಲೆಗಳನ್ನು ಅರಸಿ ಬೆಂಗಳೂರು ಮತ್ತು ಇತರೆ ನಗರಗಳಲ್ಲಿ ಸಾವಿರಾರು ಕಿಲೋಮೀಟರುಗಳಷ್ಟು ಪ್ರಯಾಣ ಮಾಡಿದರು. ಅವರು ಶಾಲೆಯ ಅಧಿಕಾರಿಗಳನ್ನು ಭೇಟಿ ಮಾಡಿ 8ನೇ ವಿಶ್ವ ಚಾನಲ್ಸ್ ದಿನದ ಬಗ್ಗೆ ವಿವರಿಸಿ ಹೇಳಿದರು. ಉಪಾಧ್ಯಾಯರುಗಳಿಗೆ, ವಿದ್ಯಾರ್ಥಿ ಮುಖಂಡರುಗಳಿಗೆ ತಾವೇ ಸ್ವತಂತ್ರವಾಗಿ ಲೈಟ್ ಚಾನಲಿಂಗ್ ಮಾಡಲು ತರಬೇತಿ ನೀಡಿದರು.

ವಿಶ್ವ ಚಾನಲ್ಸ್ ದಿನದಂದು ಸಾವಿರಾರು ಶಾಲೆಗಳು ತಾವೇ ಸ್ವತಂತ್ರವಾಗಿ ಲೈಟ್ ಚಾನಲಿಂಗ್ ಮಾಡಿದ್ದಾರೆ. ಅನೇಕ ಶಾಲೆಗಳು ವಾಟ್ಸಪ್ ಮತ್ತು ಮೇಲ್ ಮೂಲಕ ಫೋಟೊಗಳನ್ನು ನಮಗೆ ಕಳುಹಿಸಿ, ಅವರು ಭಾಗವಹಿಸಿದ್ದರ ಬಗ್ಗೆ ದೃಢಪಡಿಸಿದ್ದಾರೆ. ಇನ್ನು ಅನೇಕರು ಫೋನ್ ಮೂಲಕ ತಿಳಿಸಿದ್ದಾರೆ. ಅಪಾರ ಬೆಂಬಲ ನೀಡಿರುವ ಎಲ್ಲ ಶಾಲಾ ಅಧಿಕಾರಿಗಳಿಗೆ ನಾವು ಕೃತಜ್ಞರಾಗಿದ್ದೇವೆ.

ಪ್ರತಿ ವರ್ಷ ಲಕ್ಷಾಂತರ ಮಕ್ಕಳು ಮತ್ತು ಹಿರಿಯರು ಬೆಳಕಿಗೆ ತೆರೆದುಕೊಳ್ಳುತ್ತಿದ್ದಾರೆ. ಅವರೆಲ್ಲರೂ ಬೆಳಕನ್ನು ತಮ್ಮ ಸಂಗಾತಿಯನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಕ್ರಮಬದ್ಧ ಲೈಟ್ ಚಾನಲಿಂಗ್ ಅಭ್ಯಾಸದ ಮೂಲಕ ತಮ್ಮನ್ನೇ ಪರಿವರ್ತಿಸಿಕೊಳ್ಳುತ್ತಿದ್ದಾರೆ. ಅವರು ಮಾಡುವ ಚಾನಲಿಂಗ್ ಅವರ ಸುತ್ತ ಮುತ್ತ ಹಾಗೂ ಪ್ರಪಂಚದ ಮೇಲೆ ಪ್ರಭಾವ ಬೀರುತ್ತದೆ. ಈ ಅದ್ಭುತ ಆತ್ಮಗಳಿಂದ ಈಗಾಗಲೇ ಈ ಕ್ರಾಂತಿಯು ಬಲಿಷ್ಠಗೊಂಡಿದೆ.

ಲಕ್ಷಾಂತರ ಮಕ್ಕಳು ಚಾನಲ್ ಮಾಡಿರುವ ಬೆಳಕಿನಿಂದ ಖಂಡಿತವಾಗಿ ಪ್ರಪಂಚದ ಮೇಲೆ ಸಕಾರಾತ್ಮಕ ಪರಿಣಾಮವುಂಟಾಗುತ್ತದೆ. ನಮಗೆ ಅಪಾರ ಬೆಂಬಲ ನೀಡಿರುವುದಕ್ಕಾಗಿ ವಿದ್ಯಾರ್ಥಿಗಳಿಗೆ, ಉಪಾಧ್ಯಾಯರುಗಳಿಗೆ ಮತ್ತು ಇನ್ನಿತರ ಬೆಳಕಿನ ಚಾನಲ್‌ಗಳಿಗೆ ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ಪ್ರಪಂಚದಲ್ಲಿ ಅಗಾಧವಾದ ಪ್ರೀತಿ ಮತ್ತು ಶಾಂತಿ ನೆಲಸಲಿ ಎಂದು ಹಾರೈಸುತ್ತೇವೆ. ■

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಯಾವುದಾದರೊಂದು ಲೈಟ್ ಚಾನಲಿಂಗ್ ಕೇಂದ್ರದಲ್ಲಿ ವಾರಕ್ಕೆ ಒಮ್ಮೆ ಲೈಟ್ ಚಾನಲ್ ಮಾಡಲು ದಯವಿಟ್ಟು ನಮ್ಮ ಜೊತೆಗೂಡಿ ಹಾಗೂ ಶಾಂತಿ ಮತ್ತು ಪ್ರೀತಿಯ ಕಂಪನಗಳನ್ನು ಹರಡಲು ಮತ್ತು ಬಲಗೊಳಿಸಲು ಸಹಾಯ ಮಾಡಿ. ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿ ಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳ ಬಹುದು.

### ಸೋಲಾಪೂರ್

**ಸೋಮವಾರ ಮತ್ತು ಗುರುವಾರ**
**(ಸಂಜೆ 7 - 7.15)**
ಬಾಲಗಣೇಶ್ ಮಂದಿರ, ಬುಧರ್ ಪೇಠ್,
ಮೊಹೋಲ್
☎ 09860967066 ಶ್ರೀ ವಿವೇಕಾನಂದ ಸ್ವಾಮಿ
☎ 09970800279 ಶ್ರೀಮತಿ ಸ್ವರೂಪ ಸ್ವಾಮಿ

### ಮೀರಜ್

**ಗುರುವಾರ (ಸಂಜೆ 7.45)**
ಶ್ರೀ ಶಿವರುದ್ರ ಬಿ. ಬೆಲಗನ್ವಿ,
A-Gat Plot No-135,
C/o ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
☎ 9822421463 ಶ್ರೀ ಮಹಾಜನ್

### ಚೆನ್ನೈ

**ಶನಿವಾರ (ಬೆಳಿಗ್ಗೆ 10 - 10.30)**
ನಂ. 481, ಸಾಯಿಪ್ರೇಮ್, 19ನೇ ರಸ್ತೆ,
4ನೇ ಸೆಕ್ಟರ್, ಕೆ. ಕೆ. ನಗರ
☎ 9444880409 ಶ್ರೀಮತಿ ರಾಜಲಕ್ಷ್ಮಿ ಆರ್

### ಪುಣೆ

**ಶನಿವಾರ (ಸಂಜೆ 7 - 7.30)**
3-B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ
☎ 9011038169 ಶ್ರೀ ಆಶುತೋಶ್ ನವನ್‌ಗುಲ್

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯ ಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವ ಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.



## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ಪ್ರತಿ ದಿನ ನಾನು ಮನೆಯಲ್ಲಿ 7 ನಿಮಿಷಗಳವರೆಗೆ ಲೈಟ್ ಚಾನಲಿಂಗ್ ಅಭ್ಯಾಸ ಮಾಡುತ್ತಿದ್ದೇನೆ. ನಾನು ಬೆಳಕಿನ ಸಹಾಯದಿಂದ ಎಲ್ಲ ಸಂದರ್ಭಗಳನ್ನು ಸಮರ್ಪಕವಾಗಿ ನಿಭಾಯಿಸುತ್ತೇನೆ. ಪ್ರತಿ ದಿನ ಶಾಲೆಯಲ್ಲಿ, ಪ್ರಾರ್ಥನೆ ಸಮಯದಲ್ಲಿ 7 ನಿಮಿಷ ಮತ್ತು ತರಗತಿಯಲ್ಲಿ 3 ನಿಮಿಷ ಲೈಟ್ ಚಾನಲಿಂಗ್ ಅಭ್ಯಾಸ ನಡೆಯುತ್ತಿದೆ. ವಿದ್ಯಾರ್ಥಿಗಳ ನಡವಳಿಕೆಯಲ್ಲಿ ಸುಧಾರಣೆ ಕಂಡು ಬಂದಿರುವುದನ್ನು ಗಮನಿಸಿದ್ದೇನೆ; ಅವರ ಅಹಂಕಾರ ಸಹ ಕಡಿಮೆಯಾಗಿದೆ, ಅವರ ಕಲಿಕೆಯ ಸಾಮರ್ಥ್ಯವೂ ಸಹ ಹೆಚ್ಚಿದೆ ಮತ್ತು ಅವರ ಆರೋಗ್ಯವೂ ಸುಧಾರಿಸಿದೆ.

–ಶ್ರೀಮತಿ. ಸಂಧ್ಯಾ ರಾವ್, ಮುಖ್ಯೋಪಾಧ್ಯಾಯಿನಿ,
ಅರಣೋದಯ ಶಾಲೆ, ಸುಂಕದ ಕಟ್ಟೆ, ಬೆಂಗಳೂರು

ನಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅಭ್ಯಾಸವನ್ನು ಕಾರ್ಯಗತಗೊಳಿಸಿದ್ದೇವೆಂದು ತಿಳಿಸಲು ನಮಗೆ ಸಂತೋಷ ವಾಗುತ್ತದೆ. ವಿದ್ಯಾರ್ಥಿಗಳ ನಡವಳಿಕೆ, ನೆನಪಿನ ಶಕ್ತಿ ಮತ್ತು ಏಕಾಗ್ರತೆ ಹೆಚ್ಚಿದೆ. ಈಗ ನಮ್ಮ ಶಾಲೆ ಪ್ರಶಾಂತವಾಗಿದೆ. ಯಾವ ದೂರುಗಳಿಲ್ಲ ಮತ್ತು ಶಿಕ್ಷೆಗಳಿಲ್ಲ. ಒಮ್ಮೆ, ಶಿಕ್ಷಕರಿಗೆ ಅವರ ಒತ್ತಡ ನಿರ್ವಹಣೆಗಾಗಿ ಒಂದು ಕಾರ್ಯಕ್ರಮವನ್ನು ಆಯೋಜಿಸಬೇಕೆಂದು ನಿರ್ಧರಿಸಿದಾಗ, ಅದರ ಅವಶ್ಯಕತೆ ಯಿಲ್ಲವೆಂದು ಅವರು ತಿಳಿಸಿದರು. ಅವರು ಪ್ರತಿ ದಿನ 7 ನಿಮಿಷಗಳ ಕಾಲ ಲೈಟ್ ಚಾನಲಿಂಗ್ ಅಭ್ಯಾಸ ಮಾಡುತ್ತಿರುವ ಕಾರಣದಿಂದ, ಅವರಿಗೆ ಯಾವ ರೀತಿಯ ಒತ್ತಡಗಳು ಇಲ್ಲವೆಂದು ಹೇಳಿದರು.

–ಶ್ರೀಮತಿ. ಕುಸುಮಾ, ಮುಖ್ಯೋಪಾಧ್ಯಾಯಿನಿ,
ಶಾಂತಿನಿಕೇತನ ಪ್ರಾಥಮಿಕ ಶಾಲೆ, ರಾಮನಗರ

ಲೈಟ್ ಚಾನಲಿಂಗ್ ಒಂದು ಉತ್ತಮ ತಂತ್ರ. ವಿದ್ಯಾರ್ಥಿ ಗಳು ಶಿಸ್ತನ್ನು ರೂಢಿಸಿಕೊಂಡಿದ್ದಾರೆ ಮತ್ತು ಅವರ ಕಲಿಕೆಯ ಸಾಮರ್ಥ್ಯ ಹೆಚ್ಚಿದೆ. ಈಗ ಅವರು ಹೆಚ್ಚು ಆತ್ಮ ವಿಶ್ವಾಸವುಳ್ಳವ ರಾಗಿದ್ದಾರೆ ಹಾಗೂ ಅವರು ತಪ್ಪುಗಳನ್ನು ಮಾಡುವುದಿಲ್ಲ. ಶಿಕ್ಷಕರು ಕೂಡ ಪ್ರಯೋಜನ ಪಡೆದಿದ್ದಾರೆ.

–ಶ್ರೀ ಕೃಷ್ಣಯ್ಯ, ಮುಖ್ಯೋಪಾಧ್ಯಾಯರು, ರೋಟರಿ
ಬೆಂಗಳೂರು ವಿದ್ಯಾಲಯ, ಬೆಂಗಳೂರು

ಲೈಟ್ ಚಾನಲಿಂಗ್ ಸೆಷನ್ ಸಮಯದಲ್ಲಿ, ನಾನು ಉಲ್ಲಾಸದಿಂದ ಮತ್ತು ಸಂತೋಷದಿಂದ ಇದ್ದೆ. ಶಾಂತಿಯನ್ನು ಅನುಭವಿಸಿದೆ. ಪ್ರತಿ ದಿನ ನಾನು ಓದುವುದಕ್ಕೆ ಕುಳಿತಾಗಲೆಲ್ಲ ಬೆಳಕನ್ನು ಚಾನಲ್ ಮಾಡುತ್ತೇನೆ. ಇದರಿಂದ ನನಗೆ ಸಂಪೂರ್ಣ ಏಕಾಗ್ರತೆಯಿಂದ ಓದಲು ಸಾಧ್ಯವಾಗಿದೆ. ನಾನು ಹೃದಯ ಪೂರ್ವಕವಾಗಿ ಲೈಟ್ ಚಾನಲಿಂಗ್ ಅಭ್ಯಾಸ ಮಾಡಿ, ನನ್ನ ಎಲ್ಲ ಅವಶ್ಯಕತೆಗಳು ಈಡೇರಲಿ ಎಂದು ದೇವರಲ್ಲಿ ಪ್ರಾರ್ಥಿಸಿದಾಗ, ಅವೆಲ್ಲವೂ ನೆರವೇರಿವೆ. ನಾನು ಲೈಟ್ ಚಾನಲಿಂಗ್ ಅಭ್ಯಾಸ ಮಾಡುತ್ತೇನೆಂದು ಮತ್ತು ಅದರ ಅನುಭವವನ್ನು ಹರಡುತ್ತೇನೆಂದು ಪ್ರಮಾಣ ಮಾಡಲು ಇಚ್ಛಿಸುತ್ತೇನೆ, ಮತ್ತು ಇತರರೂ ಲೈಟ್ ಚಾನಲಿಂಗ್ ಅಭ್ಯಾಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

–ರಕ್ಷಾಂದ ಐಮನ್, ಹತ್ತನೇ ತರಗತಿ, ಕ್ಯಾನನ್ ಕ್ರೈಸ್ಟ್
ಪಬ್ಲಿಕ್ ಶಾಲೆ, ಬಿ ಟಿ ಮ್ ಲೇಔಟ್, ಬೆಂಗಳೂರು

ಪ್ರತಿದಿನ ಕೇವಲ 5 ನಿಮಿಷಗಳ ಲೈಟ್ ಚಾನಲಿಂಗ್ ಅಭ್ಯಾಸವು ಇಡೀ ದಿನವನ್ನು ಬದಲಾಯಿಸುತ್ತದೆ. ಇದು ವಿದ್ಯಾರ್ಥಿಗಳಿಗೆ ತಮ್ಮ ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸಲು ಸಹಾಯ ಮಾಡುತ್ತದೆ ಮತ್ತು ಅವರು ಉಲ್ಲಾಸದಿಂದ ಇರುವಂತೆ ಮಾಡುತ್ತದೆ. ಅವರು ಬೇರೆ ಬೇರೆ ಹಿನ್ನಲೆಗಳಿಂದ ಬಂದಿದ್ದಾರೆ, ಆದರೆ ಲೈಟ್ ಚಾನಲಿಂಗ್ ಅವರೆಲ್ಲರಿಗೂ ಸರಿಯಾದ ದಿಕ್ಕಿನಲ್ಲಿ ಯೋಚಿಸುವಂತೆ ಮಾಡುತ್ತದೆ. ಈ ತಂತ್ರವನ್ನು ತಿಳಿಸಿ ಕೊಟ್ಟಿದ್ದಕ್ಕಾಗಿ ಕೃತಜ್ಞತೆಗಳು.

–ಶ್ರೀಮತಿ ಶಾರದ ಎನ್ ಕೆ, ಮುಖ್ಯೋಪಾಧ್ಯಾಯಿನಿ,
ವಿದ್ಯಾಮಾನ್ಯ ವಿದ್ಯಾಕೇಂದ್ರ, ಬೆಂಗಳೂರು

ಶ್ರೀಮತಿ ಮೇಧಾ ಕುಲಕರ್ಣಿ ಹಾಗೂ ಅವರ ತಂಡ 14ನೇ ಸೆಪ್ಟಂಬರ್ 2017 ರಂದು ಲೈಟ್ ಚಾನಲಿಂಗ್ ಸೆಷನ್‌ಅನ್ನು ನಮ್ಮ ಕಾಲೇಜ್ ಆವರಣದಲ್ಲಿ ನಡೆಸಿ ಕೊಟ್ಟಿದ್ದಕ್ಕಾಗಿ ಅವರಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸಲು ಇಷ್ಟಪಡುತ್ತೇವೆ. ಸುಮಾರು 311 ವಿದ್ಯಾರ್ಥಿಗಳು ಈ ಸೆಷನ್‌ನಲ್ಲಿ ಭಾಗವಹಿಸಿದ್ದರು. ಸೆಷನ್ ಬಹಳ ಉತ್ತಮ ವಾಗಿತ್ತು ಮತ್ತು ಅದು ಮುಗಿದ ನಂತರ ವಿದ್ಯಾರ್ಥಿಗಳೆಲ್ಲರೂ ಸಮಾಧಾನದಿಂದ ಇದ್ದರು. ಈ ತಂತ್ರವನ್ನು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ ಹಾಗೂ ಇದು ನಿಜವಾಗಿಯೂ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಸಮಯದಲ್ಲಿ ಏಕಾಗ್ರತೆಯಿಂದ ಓದುವುದಕ್ಕೆ ಸಹಾಯ ಮಾಡುತ್ತಿದೆ.

–ಶ್ರೀಮತಿ ಪದ್ಮ ಕಾಂಡಾರ್ಕರ್, ತರಬೇತಿ ಮತ್ತು
ಉದ್ಯೋಗ ನಿರ್ವಹಣೆ ಅಧಿಕಾರಿ, ಮಹಾರಾಷ್ಟ್ರ ಕಾಲೇಜ್
ಆಫ್ ಸೈನ್ಸ್ ಮತ್ತು ಕಾಮರ್ಸ್, ಪುಣೆ

ವಿಶ್ವ ಚಾನಲ್ಸ್ ದಿನವಾದ ಫೆಬ್ರುವರಿ 1, 2018ರಂದು
1 ಮಿಲಿಯನ್‌ಗೂ ಹೆಚ್ಚು ಜನರು ಬೆಳಕನ್ನು ಚಾನಲ್ ಮಾಡಿದರು.
**ನಿಮಗೆಲ್ಲರಿಗೂ ವಂದನೆಗಳು.**

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್: 23380167 / 23209909, ಇಮೇಲ್: lotus.creation777@gmail.com, ವೆಬ್‌ಸೈಟ್: www.lotusprinters.com
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ